ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಕ್ಲಬ್ ದಾಖಲಾತಿ ರಿಜಿಸ್ಟರ್‌ನಲ್ಲಿ ನಿರ್ವಹಿಸುವುದು ಹಾಗೂ ದೂರವಾಣಿ ಸಂಖ್ಯೆಗಳನ್ನು ನೀಡುವುದು.

15. ಪೊಲೀಸ್ ಇಲಾಖೆಗಳಲ್ಲಿ ನಡೆಯುವ 'ತೆರೆದ ಮನೆ' ಕಾರ್ಯಕ್ರಮಗಳಲ್ಲಿ ಕ್ಲಬ್ ಹಾಗೂ ಇತರ ಮಕ್ಕಳಿಗೆ ಭಾಗವಹಿಸುವಂತೆ ನೋಡಿಕೊಳ್ಳುವುದು.

## ಕ್ಲಬ್ ರಚಿಸುವ ವಿಧಾನ /ಕರ್ತವ್ಯಗಳು

1. ಪ್ರಾರಂಭದಲ್ಲಿ ಶಾಲಾ ಮತ್ತು ಸಮುದಾಯ ಮಟ್ಟದಲ್ಲಿ ಹಲವಾರು ಅರಿವಿನ ಕಾರ್ಯಕ್ರಮ ನಡೆಸಿ ಮಕ್ಕಳ, ಸಮುದಾಯದ ಒಪ್ಪಿಗೆ ಪಡೆದು ಕ್ಲಬ್‌ನ ಅಗತ್ಯ, ಉಪಯೋಗವನ್ನು ಅರ್ಥ ಮಾಡಿಕೊಂಡು ಕ್ಲಬ್‌ನ ರಚನೆಗೆ ಮುಂದಾಗುವುದು.

2.ಎಲ್ಲಾ ಮಕ್ಕಳು, ಸಭೆ ಸೇರಿ ಕ್ಲಬ್ ರಚಿಸುವುದು.

3.ಸದಸ್ಯರು : 4ನೇ ತರಗತಿಯಿಂದ ಪ್ರಾರಂಭಿಸಿ ಶಾಲೆಯ ಪ್ರತೀ ತರಗತಿಯಿಂದ ಇಬ್ಬರು ಪ್ರತಿನಿಧಿಗಳು [ವಿದ್ಯಾರ್ಥಿ / ವಿದ್ಯಾರ್ಥಿನಿ ಗಂಡು ಮತ್ತು ಹೆಣ್ಣು ಮಕ್ಕಳಿದ್ದಲ್ಲಿ ಕಡ್ಡಾಯವಾಗಿ ಒಂದು ಗಂಡು ಹಾಗೂ ಒಂದು ಹೆಣ್ಣು ಮಗುವಿನ ಆಯ್ಕೆ ಕಡ್ಡಾಯ], ಒಬ್ಬರು ಕ್ರಿಯಾಶೀಲ ಅಧ್ಯಾಪಕರು ಇದರ ಸಂಚಾಲಕರನ್ನಾಗಿ ನೇಮಿಸುವುದು. ಶಾಲಾ ಮುಖ್ಯೋಪಧ್ಯಾಯರು, ಎಸ್.ಡಿ.ಎಮ್.ಸಿ. ಅಧ್ಯಕ್ಷರು, ಒಬ್ಬರು ಪೋಷಕರು ಒಟ್ಟು 15 ರಿಂದ 20ರ ವರೆಗೆ ಈ ಕ್ಲಬ್‌ನಲ್ಲಿ ಸದಸ್ಯರನ್ನು ಮಕ್ಕಳ ಮುಖಾಂತರ ಆಯ್ಕೆ ಮಾಡಬೇಕು.

4.ಶಿಕ್ಷಕರು, ಎಸ್.ಡಿ.ಎಮ್.ಸಿ. ಸದಸ್ಯರು ಮತ್ತು ಪೋಷಕರು ಸದಸ್ಯರಾಗಿ ಮಾತ್ರ ಇರುತ್ತಾರೆ. ಎಲ್ಲಾ ಸಭೆಗಳನ್ನು ಮಕ್ಕಳೇ ನಡೆಸುವುದು.

5.ನಡವಳಿಕೆ ಪುಸ್ತಕ ಮುಖ್ಯೋಪಾಧ್ಯಾಯರ ಕಛೇರಿಯಲ್ಲಿ ಇಡುವುದು.

6.ಪ್ರತಿ ಸಭೆಯ ನಡವಳಿಕೆಯನ್ನು ಮಕ್ಕಳೇ ಬರೆಯುವುದು. ಎಲ್ಲಾ ಸದಸ್ಯರ ಸಹಿ ಪಡೆಯುವುದು.

7.ಕ್ಲಬ್‌ನ ಸಮಿತಿ ಸದಸ್ಯರು ಪ್ರತಿ ತಿಂಗಳು ಸಭೆ ಸೇರಿ ಪ್ರತಿ ತಿಂಗಳ ಯೋಜನೆ ತಯಾರಿಸಿ, ಕಾರ್ಯಕ್ರಮದ ಚರ್ಚೆ ಮತ್ತು ಮುಂದಿನ ತಿಂಗಳ ಯೋಜನೆ ತಯಾರಿಸಿ, ಕಾರ್ಯಕ್ರಮ ನಡೆಸಬೇಕು.

8.ಪ್ರತಿ ತಿಂಗಳು 'ಕ್ಲಬ್'ನ ಮುಖಾಂತರ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವುದು.

9.ಶಾಲಾ ವ್ಯಾಪ್ತಿಯಲ್ಲಿ "ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್"ನ ಪರಿಕಲ್ಪನೆ ಅಡಿಯಲ್ಲಿ ಪ್ರತಿ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚಿಸಲು ದಿನಾಂಕ 23.05.2009ರ ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರ ನಿರ್ದೇಶನವನ್ನು ಅನುಸರಿಸುವುದು.

10. ಕ್ಲಬ್ ರಚನೆ ಮತ್ತು ಸಂಯೋಜನೆಗೆ ಸಹಕರಿಸಲು ಸರ್ವಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಸಂಪನ್ಮೂಲ ಕೇಂದ್ರ ಹಾಗೂ ಯುನಿಸೆಫ್- ಮಕ್ಕಳ ಸಂರಕ್ಷಣಾ ಯೋಜನೆಯ ಸಹಕಾರ ಪಡೆಯಬಹುದಾಗಿದೆ.

11. ಮಕ್ಕಳ ಹಕ್ಕುಗಳ ಅನುಷ್ಠಾನ ಒಂದು ರಾಷ್ಟ್ರೀಯ ಕಾರ್ಯಕ್ರಮವಾಗಿರುವುದರಿಂದ ವಿವಿಧ ಇಲಾಖೆಗಳು ಶಾಲಾ ಮಟ್ಟದಲ್ಲಿ ರಚಿಸಲು ತಿಳಿಸಿದ ಸಮಿತಿಗಳನ್ನೆಲ್ಲವನ್ನು ಮಕ್ಕಳ ಹಕ್ಕುಗಳ ಕ್ಲಬ್‌ನಡಿಯಲ್ಲಿ ತರಬೇಕು. ಆ ಎಲ್ಲಾ ಸಮಿತಿಗಳು ಮಕ್ಕಳ ಹಕ್ಕುಗಳ ಭಾಗವಾಗಿರುವುದರಿಂದ ಶಾಲಾ ಮಟ್ಟದಲ್ಲಿರುವ ಎಲ್ಲಾ ಸಮಿತಿಗಳನ್ನು (ಸಾಂಸ್ಕೃತಿಕ ಕ್ಲಬ್, ಪರಿಸರ ಕ್ಲಬ್, ಮೀನಾ ತಂಡ, ಕಾನೂನು ಅರಿವು ಕ್ಲಬ್, ಗ್ರಹಕರ ವೇದಿಕೆ, ಕನ್ನಡ ಕ್ಲಬ್, ಗಣಿತ ಕ್ಲಬ್, ವಿಜ್ಞಾನ ಕ್ಲಬ್) ಮಕ್ಕಳ ಹಕ್ಕುಗಳ ಕ್ಲಬ್‌ನ ಅಡಿಯಲ್ಲಿ ಸಮಿತಿಗಳನ್ನಾಗಿ ಮಾಡಿ ಮಕ್ಕಳ ಹಕ್ಕುಗಳ ಕ್ಲಬ್‌ಗಳು ಸಮಗ್ರವಾಗಿ ಮುಖ್ಯ ಸಮಿತಿಯಾಗಿ ರಚಿಸುವುದು.

### ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ
✆ 08539–220844],
ಜಿಲ್ಲಾ ಪಂಚಾಯತ್, ಕೊಪ್ಪಳ
✆ 08539–221043/220002,
ಪೊಲೀಸ್ ಇಲಾಖೆ, ಕೊಪ್ಪಳ
✆ 08539–230111/100,
ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ
✆ 08539–221303/222243,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ
✆ 08539–222703,
ಕಾರ್ಮಿಕ ಇಲಾಖೆ, ಕೊಪ್ಪಳ
✆ 08539–222590,
ಮಕ್ಕಳ ಕಲ್ಯಾಣ ಸಮಿತಿ, ಕೊಪ್ಪಳ
✆ 08539–200755.
ಹಾಗೂ ಯುನಿಸೆಫ್–ಮಕ್ಕಳ ಸಂರಕ್ಷಣಾ ಯೋಜನೆ, ಕೊಪ್ಪಳ
✆ 08539– 225006,

ದಿ ಪ್ಯಾರಾಮೌಂಟ್ ಪ್ರಿಂಟರ್ಸ್ & ಸರ್ವಿಸಸ್, ಗಂಗಾವತಿ ಮೊ: 98450 14492

# ಇಂದಿನ ಮಕ್ಕಳೇ ಇಂದಿನ ಪ್ರಜೆಗಳು



## ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಮಕ್ಕಳೇ ರಚಿಸಿ, ನಡೆಸುವ ಮಕ್ಕಳ ಸಮಿತಿಯೇ "ಮಕ್ಕಳ ಹಕ್ಕುಗಳ ಕ್ಲಬ್"



**ಸರ್ಕಾರಿ ಮತ್ತು ಖಾಸಗಿಯ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿ " ಮಕ್ಕಳ ಹಕ್ಕುಗಳ ಕ್ಲಬ್"ನ ರಚನೆ " ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್"**

# ಗುರಿ

"ಪ್ರತಿ ಶಾಲೆಯಲ್ಲಿ 100% ಮಕ್ಕಳ ದಾಖಲಾತಿ
ಹಾಗೂ ಹಾಜರಾತಿಯನ್ನು ಖಾತ್ರಿಪಡಿಸಿ ಶಾಲೆ ಮತ್ತು
ಸಮುದಾಯವನ್ನು "ಮಕ್ಕಳ ಸ್ನೇಹಿ" ಯನ್ನಾಗಿ
ಪರಿವರ್ತಿಸಿ, ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಿ,
ಮಕ್ಕಳ ಸರ್ವತೋಮುಖ
ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವುದು"

## ಉದ್ದೇಶಗಳು

1. ಸಂವಿಧಾನದ ಪ್ರಕಾರ ಮತ್ತು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ಮಕ್ಕಳು ಎಲ್ಲಾ ಹಕ್ಕುಗಳ ಬಗ್ಗೆ ತಿಳಿಯುವುದು ಹಾಗೂ ತಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.

2.ಮಕ್ಕಳ ಹಕ್ಕುಗಳ ಬಗ್ಗೆ ಆಯಾ ಶಾಲೆಯಲ್ಲಿ ಮತ್ತು ಶಾಲಾ ವ್ಯಾಪ್ತಿಯಲ್ಲಿರುವ ಸಮುದಾಯಕ್ಕೆ ಜಾಗೃತಿ ಮೂಡಿಸುವುದು.

3.ಪ್ರತಿ ಶಾಲೆಯಲ್ಲಿ ಎಲ್ಲಾ ಶಾಲಾ ಚಟುಟಿಕೆಗಳನ್ನು ಮಕ್ಕಳ ಹಕ್ಕುಗಳ ಆಧಾರಿತವಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.

4.ಶಾಲಾ ಚಟುವಟಿಕೆಗಳು "ಮಕ್ಕಳ ಹಕ್ಕುಗಳ ಕ್ಲಬ್" ಮುಖಾಂತರ ತೀರ್ಮಾನ ಕೈಗೊಂಡು ಕಾರ್ಯಕ್ರಮಗಳನ್ನು ರೂಪಿಸುವುದು.

5.ಮಕ್ಕಳು ಶಾಲೆ ಬಿಡುವುದನ್ನು (10ನೇ ತರಗತಿ ತನಕ) ಸಂಪೂರ್ಣ ತಡೆಗಟ್ಟುವುದು

6.ಬಾಲ ಕಾರ್ಮಿಕ ಪದ್ಧತಿ ಹಾಗೂ ಬಾಲ್ಯ ವಿವಾಹವನ್ನು ಸಂಪೂರ್ಣ ವಿರೋಧಿಸಿ, ಖಂಡಿಸಿ ಅದರ ನಿರ್ಮೂಲನೆಗೆ ಕಾರ್ಯಕ್ರಮ ರೂಪಿಸುವುದು.

7.ಎಲ್ಲಾ ಮಕ್ಕಳ (0-18 ವರ್ಷ) ಸರ್ವತೋಮುಖ ಅಭಿವೃದ್ಧಿ, ಶಿಕ್ಷಣ ಮತ್ತು ಬಾಲ್ಯವನ್ನು ಕಾಪಾಡಿ ಉತ್ತಮ ನಾಗರಿಕರನ್ನಾಗಿ ರೂಪಿಸುವುದು.

8.ಸಮುದಾಯ, ಎಸ್.ಡಿ.ಎಮ್.ಸಿ., ಗ್ರಾಮ ಪಂಚಾಯತ್, ಪೋಷಕರು, ಶಾಲೆ ಮತ್ತು ಮಕ್ಕಳು ಎಲ್ಲಾ ಒಟ್ಟಾಗಿ ಒಂದೇ ವೇದಿಕೆಯಿಂದ ಮಕ್ಕಳು ಮತ್ತು ಶಾಲೆಯ ಅಬಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು.

9.ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮತ್ತು ಮಕ್ಕಳ ಹಕ್ಕುಗಳಿಗೆ ಬದ್ಧರಾಗಲು ಕ್ರಮ ಕೈಗೊಳ್ಳುವುದು.

10. ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಮತ್ತು ಪಂಚಾಯತಿಗಳಿಗೆ ಶಾಲೆ ಹಾಘೂ ವಿದ್ಯಾರ್ಥಿಗಳ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡುವ ಹಾಗೂ ಸೂಕ್ತ ಕ್ರಮಗಳಿಗೆ ಒತ್ತಾಯಿಸುವ ಕೊಂಡಿಯಾಗುವುದು.

11. ಶಾಲೆಗಳಲ್ಲಿ ಶಿಕ್ಷಕರು ಮತ್ತು ಮಕ್ಕಳ ನಡುವೆ ಸ್ನೇಹೀ ವಾತಾವರಣ ಕಲ್ಪಿಸುವುದು.

12. ಮಕ್ಕಳಿಗೆ ಶಿಕ್ಷಣದ ಮಹತ್ವದ ಬಗ್ಗೆ ಅರುವಿ ಮೂಡಿಸಿ ವೈಯುಕ್ತಿಕ ಪ್ರತೀ ಮಗುವಿನ 100% ದಾಖಲಾತಿಯನ್ನು ಹೆಚ್ಚಿಸುವುದು.

13. ಮಕ್ಕಳಲ್ಲಿ ಸ್ವಚ್ಛತೆಯ ಅರಿವು ಮೂಡಿಸಿ ವೈಯುಕ್ತಿಕ ಮತ್ತು ಪರಿಸರದ ಸ್ವಚ್ಛತೆ ಕಾಪಾಡಲು ಪ್ರೇರೆಪಿಸುವುದು.

14. ಮಕ್ಕಳ ಆರೋಗ್ಯದ ಬಗ್ಗೆ ಹಾಗೂ ಶಾಲಾ ಮೂಲಭೂತ ವ್ಯವಸ್ಥೆಗಳು ಸರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು.

## ಮಕ್ಕಳ ಹಕುಗಳ ಕ್ಲಬ್‌ನ ಕಾರ್ಯಚಟುವಟಿಕೆ

1. ಮಕ್ಕಳ ಹಕ್ಕುಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳನ್ನು ಶಾಲಾ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ನಡೆಸುವುದು (ಚಲನಚಿತ್ರ, ಸಂಗೀತ ಸ್ಪರ್ಧೆಗಳು, ಸಾರ್ವಜನಿಕ ಸಭೆ, ಬೀದಿನಾಟಕ, ಮಕ್ಕಳ ಸಭೆ ಇತ್ಯಾದಿ) ಹಾಗೂ ನಿರಂತರವಾಗಿ ಈ ಕಾರ್ಯಕ್ರಮಗಳನ್ನು ಮುಂದುವರಿಸುವುದು.

2.ಪ್ರತಿ ತಿಂಗಳು "ಕ್ಲಬ್"ನ ಮಾಸಿಕ ಸಭೆ. ಈ ಸಭೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳ ಬಗ್ಗೆ ಚರ್ಚಿಸಿ, ಮಕ್ಕಳ ಅಭಿಪ್ರಾಯ ಪಡೆದು ತೀರ್ಮಾನಿಸುವುದು.

3.ಎಲ್ಲಾ ಮಕ್ಕಳ, ಶಾಲೆಯ ಸಮಸ್ಯೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಈ ಕ್ಲಬ್ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕಾರ್ಯಗತಗೊಳಿಸುವುದು.

4.ಪ್ರತಿ ತಿಂಗಳೂ ಮಕ್ಕಳ ಹಕ್ಕುಗಳ ಕುರಿತಾಗಿ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಇತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.

5.ಮಕ್ಕಳ ಹಕ್ಕುಗಳ ಕುರಿತಾಗಿ ಮಕ್ಕಳಿಂದ ಗೋಡೆ ಬರಹ, ಭಿತ್ತಿಪತ್ರಗಳು ಇತ್ಯಾದಿಗಳನ್ನು ತಯಾರಿಸಿ ಅರಿವು ಮೂಡಿಸುವುದು.

6.ಎಲ್ಲಾ ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ, ರಾಷ್ಟ್ರೀಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಈ ಕ್ಲಬ್‌ನ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕ್ಲಬ್‌ನ ನೇತೃತ್ವದಲ್ಲಿ ಆಚರಿಸುವುದು.

7.ಬಾಲ ಕಾರ್ಮಿಕ ಮುಕ್ತ ಸಮುದಾಯವನ್ನಾಗಿ ಮಾಡುವುದು.

8.ಯಾವುದೇ ಮಗು 10ನೇ ತರಗತಿ ತನಕ ಶಾಲೆ ಬಿಡದಂತೆ ನೋಡಿಕೊಳ್ಳುವುದು ಹಾಗೂ ಮಕ್ಕಳ ಹಕ್ಕು ಮತ್ತು ಹಿತವನ್ನು ಎಲ್ಲಾ ದೃಷ್ಟಿಯಿಂದ ಕಾಪಾಡುವುದು. ಸಂಪೂರ್ಣ ಹಾಜರಾತಿ ಶಾಲೆಯನ್ನಾಗಿ ಮಾಡುವುದು. ಅದಕ್ಕೆ ಪೂರಕವಾದ ಎಲ್ಲ ಚಟುವಟಿಕೆಯನ್ನು ಕ್ಲಬ್‌ನ ಮುಖಾಂತರ ಶಾಲೆಯಲ್ಲಿ ಹಮ್ಮಿಕೊಳ್ಳುವುದು.

9.ಸಂಪೂರ್ಣ ಹಾಜರಾತಿ ಶಾಲೆಯನ್ನಾಗಿ ಮಾಡುವುದು. ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಯನ್ನು ಕ್ಲಬ್ ಮುಖಾಂತರ ಶಾಲೆಯಲ್ಲಿ ಹಮ್ಮಿಕೊಳ್ಳುವುದು.

10. ಪ್ರತಿ ತಿಂಗಳಿಗೊಮ್ಮೆ ಎಸ್.ಡಿ.ಎಮ್.ಸಿ. ಸಭೆ ಆಗುವಂತೆ ನೋಡುವುದು.

11. ತಮ್ಮ ಶಾಲಾ ವ್ಯಾಪ್ತಿಯಲ್ಲಿ ಬಾಲ ಕಾರ್ಮಿಕತೆ, ಬಾಲ್ಯ ವಿವಾಹ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ಪ್ರಕರಣ ಕಂಡಾಗ ಕ್ಲಬ್‌ನ ವತಿಯಿಂದ ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡುವುದು.

12. ತಮ್ಮ ಶಾಲಾ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ, ಗ್ರಾಮ ಪಂಚಾಯತ್, ಪೋಲೀಸ್ ಠಾಣೆ, ಮಹಿಳಾ ಸಂಘ, ಸ್ವ-ಸಹಾಯ ಸಂಘ, ಯುವಕ ಸಂಘಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು ಶಾಲಾ ಅಭಿವೃದ್ಧಿಗೆ ಸಹಭಾಗಿತ್ವ ಪಡೆಯುವುದು.

13. ಅನಿಯಮಿತವಾಗಿ ಶಾಲೆಗೆ ಗೈರು ಹಾಜರಾಗುವ ಮಕ್ಕಳ ಶಾಲೆ ಬಿಡುವಿಕೆಯನ್ನು ತಡೆಯುವುದು ಹಾಗೂ ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವುದು.

14. ಮಕ್ಕಳ ರಕ್ಷಣಾ ಯೋಜನೆಗೆ ಇರುವ ವ್ಯವಸ್ಥೆಗಳ ಬಗ್ಗೆ ಮಕ್ಕಳ ಸಹಾಯವಾಣಿಗೆ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೋಲೀಸ್‌ಘಟಕ